ಉಪತಹಶೀಲ್ದಾರವರ ನ್ಯಾಯಾಲಯ ನಾಡ ಕಛೇರಿ ಹೊಸಹಳ್ಳಿ

ಸಂ/ಕಂ/ಹ.ಬ./ನಾ.ಕ.ಹೊ/49/2015-16 ದಿನಾಂಕ:12-04-2016

| ಅರ್ಜಿದಾರರು | ತಕರಾರುದಾರರು |
|---|---|
| 1)ಅಂಜೀನಮ್ಮ ಗಂಡ ಲೇಟ್ ದೊಡ್ಡ ಹನುಮಂತಪ್ಪ<br>2) ಹೊಟ್ಟೆ ಮಾರಮ್ಮ ಗಂಡ ಲೇಟ್ ಹೊಟ್ಟೆ ಹನುಮಂತಪ್ಪ<br>3)ಬಾಲಪ್ಪ ತಂದೆ ಲೇಟ್ ದೊಡ್ಡಬಸಪ್ಪ<br>4)ನಾಗಪ್ಪ ತಂದೆ ಲೇಟ್ ದೊಡ್ಡಬಸಪ್ಪ<br>ಮಂಗಾಪುರ ಗ್ರಾಮ<br>ಕೂಡ್ಲಿಗಿ ತಾಲೂಕು | ಕಂದಾಯ ಪರಿವೀಕ್ಷಕರು<br>ಹೊಸಹಳ್ಳಿ |
| ಕೂಡ್ಲಿಗಿ ತಾಲೂಕು ಮಂಗಾಪುರ ಗ್ರಾಮದ ಸನಂ 79/2ಪೈಕಿ ವಿಸ್ತೀರ್ಣ 3-00 ಎಕ್ರೆ ಜಮೀನನ್ನು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಮಂಗಾಪುರ ಗ್ರಾಮದ ಸನಂ 79/2ಪೈಕಿ ವಿಸ್ತೀರ್ಣ 3-00 ಎಕ್ರೆ ಜಮೀನನ್ನು ಸದರಿ ಗ್ರಾಮದ ಬಾಲಪ್ಪ ತಂದೆ ದೊಡ್ಡಬಸಪ್ಪ ಇವರು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಮಂಗಾಪುರ ಇವರು ನಮೂನೆ-21 ರ ನೋಟಿಸನ್ನು ದಿನಾಂಕ: 25-02-2015 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಅರ್ಜಿದಾರರು ಮರಣ ಪ್ರಮಾಣ ಪತ್ರ ಹಾಗೂ ನಮೂನೆ-21 ಕ್ಕೆ ಸಹಿ ಮಾಡಿಲ್ಲದ ಕಾರಣ ಈ ಪ್ರಕರಣದ ಎಂ.ಆರ್ ನಂ: 15/2014-15. ದಿನಾಂಕ:26-03-2015 ರಲ್ಲಿ ಗೈರು ಮಂಜೂರು ಮಾಡಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದೆಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸು ನೀಡಿ ದಿನಾಂಕ 18-08-2015 ರಿಂದ 12-04-2016 ರ ವರೆಗೆ ವಿಚಾರಣೆ ಮಾಡಲಾಯಿತು

ವಿಚಾರಣೆಯ ಸಮಯದಲ್ಲಿ ಅರ್ಜಿದಾರರು ಗೈರು ಹಾಜರಾಗಿರುತ್ತಾರೆ. ಅರ್ಜಿದಾರರು ಮಂಗಾಪುರ ಗ್ರಾಮದ ಸನಂ 79/2ಪೈಕಿ ವಿಸ್ತೀರ್ಣ 3-00 ಎಕ್ರೆ ಜಮೀನನ್ನು ನಮ್ಮ ತಾಯಿಯವರಾದ ಹನುಮವ್ವ ಇವರ ಹೆಸರಲ್ಲಿ ಲೆಕ್ಕ ದಾಖಲೆ ಪಟ್ಟಾ ಇರುತ್ತದೆ. ಇವರು ದಿನಾಂಕ 06-05-1993 ರಂದು ಹಾಗೂ ನನ್ನ ಅಣ್ಣನಾದ ದೊಡ್ಡ ಹನುಮಂತಪ್ಪ ಇವರು ದಿನಾಂಕ 15-07-1995 ರಂದು ಹಾಗೂ ಇನ್ನೊಬ್ಬ ಅಣ್ಣನಾದ ಹೊಟ್ಟೆ ಹನುಮಂತಪ್ಪ ಇವರು ದಿನಾಂಕ 25-01-2009 ರಂದು ನಿಧನ ಹೊಂದಿರುತ್ತಾರೆ. ಕಾರಣ ಪೋತಿವಾರಸು ಹಕ್ಕಿನ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಮಾತ್ರ ಸಲ್ಲಿಸಿದ್ದು ವಿಚಾರಣೆಗೆ ನೋಟಿಸ್ಸುಗಳು ಜಾರಿಯಾಗಿದ್ದರೂ ಹಾಜರಾಗಿ ಯಾವುದೇ ಹೇಳಿಕೆಗಳನ್ನಾಗಲಿ. ದಾಖಲೆಗಳನ್ನಾಗಲಿ ಸಲ್ಲಿಸಿರುವುದಿಲ್ಲ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರು ವಿಚಾರಣೆಗೆ ಗೈರು ಹಾಜರಾಗಿರುವ ಕಾರಣ ಅವರು ಈ ಬಗ್ಗೆ ಆಸಕ್ತಿ ಇಲ್ಲವೆಂದು ಪರಗಣಿಸಿ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

**–:ಆದೇಶ:–**

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಸ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲ್ಲೂಕು ಮಂಗಾಪುರ ಗ್ರಾಮದ ಸನಂ 79/2ಪೈಕಿ ವಿಸ್ತೀರ್ಣ 3–00 ಎಕ್ರೆ ಜಮೀನಿನ ಅರ್ಜಿದಾರರು ವಿಚಾರಣೆಗೆ ಗೈರು ಹಾಜರಾಗಿರುವ ಕಾರಣ ಅವರ ಅರ್ಜಿಯನ್ನು ತಿರಸ್ಕರಿಸುತ್ತಾ ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ಈ ಹಂತದಲ್ಲಿ ಮುಕ್ತಾಯಗೊಳಿಸಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ: 12–04–2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ ಹೊಸಹಳ್ಳಿ

ಇದರ ಪ್ರತಿಯನ್ನು:

1) ಅರ್ಜಿದಾರರಾದ ಅಂಜೀನಮ್ಮ ಗಂಡ ದೊಡ್ಡಹನುಮಂತಪ್ಪ ಹೊಟ್ಟೆ ಮಾರಮ್ಮ ಗಂಡ ಹೊಟ್ಟ ಹನುಮಂತಪ್ಪ. ಬಾಲಪ್ಪ. ನಾಗಪ್ಪ ತಂದೆ ಲೇಟ್ ದೊಡ್ಡ ಬಸಪ್ಪ. ಮಂಗಾಪುರ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ಕಂದಾಯ ಪರವೀಕ್ಷಕರು ಹೊಸಹಳ್ಳಿ ಇವರ ಮಾಹಿತಿಗಾಗಿ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕೆ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.